Doc:117
T.P-2

SATYAVADI Founded 1917 Regd. No. M 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 179] ಗುರುವಾರ 4—4—46 [ಬಿಡಿ ಪ್ರತಿ 3 ಪೈ

ಹಿತ್ತಾಳೆ ಬೆಲೆ ಸ್ವಲ್ಪ ತಗ್ಗಿತು

ಹಿತ್ತಾಳೆ ವಸ್ತು ತಾಂಬ್ರ ನಿಯಂತ್ರಣ ಆಜ್ಞೆಯಲ್ಲಿ ಕೆಲ ಒದಲಾವಣೆಯಾಗಿರುವುದೆಂದೂ ಹಿತ್ತಾಳೆಯ ಬೆಲೆ ಸ್ವಲ್ಪ ತಗ್ಗಿಸಲಾಗಿದೆಯೆಂದೂ ಮೈಸೂರು ಸರಕಾರದ ಪಬ್ಲಿಸಿಟಿ ಆಫೀಸರವರ ಪ್ರೆಸ್ ನೋಟು ತಿಳಿಸುತ್ತದೆ.

ಪಂಚವಾರ್ಷಿಕ ಯೋಜನೆ

ಮೈಸೂರು ಸರ್ಕಾರದ ಜಿಯಲಾಜಿಕಲ್ ಇಲಾಖೆಯವರು 5 ವರ್ಷದ ಒಂದು ಯೋಜನೆಯನ್ನು ಸಿದ್ಧಪಡಿಸಿರುವರು. ಇದರಲ್ಲಿ ದೇಶದಲ್ಲಿಯ ಹಲವು ಕಡೆಗಳಲ್ಲಿ ಇರಬಹುದಾದ ಭಂಗಾರದ ಗಣಿಗಳನ್ನು ಪತ್ತೇ ಮಾಡುವುದು, ಕೋಲಿನ್ನನ್ನು ಗಣಿಗಳಿಂದ ತೆಗೆಯುವುದು, ನರಸಿಂಹರಾಜಪುರ ತೀರ್ಥಹಳ್ಳಿ ತಾಲ್ಲೂಕುಗಳಲ್ಲಿರುವ ಕಾಲು ವಿಂಡಿಟ್ ಚೀನಾ ಜೇಡಿ ಮಣ್ಣಿನಿಂದ ಪಿಂಗಾಣಿ ಸಾಮಾನು ತಯಾರಿಸುವದು, ವರ್ಷಂಪ್ರತಿ 4 ಸಾವಿರ್ ಟನ್ ಸೀಮೆಂಟ್ ಅಸ್ಬೆಸ್ಟಾಸ್ ಷೀಟುಗಳನ್ನು ತಯಾರಿಸಲು ಭದ್ರಾವತಿ ಕಬ್ಬಿಣ ಕಾರ್ಖಾನೆಗೆ ಸಂಬಂಧಿಸಿ ಕಾರ್ಯಾಲಯವನ್ನು ಸ್ಥಾಪಿಸುವದೂ, ಚಿತ್ರದುರ್ಗ ಡಿಸ್ಟ್ರಿಕ್ಟ್ ವಾಣೀ ವಿಲಾಸ ಸಾಗರದ ಹತ್ತಿರ್ ವಸ್ತು ಹುಲಿಯೂರಿನಲ್ಲಿ, ವಸ್ತು ತುಮಕೂರು ಡಿ ॥ ಸಿರಾದಲ್ಲಿ ಸೀಮೆಂಟು ಕಾರ್ಖಾನೆಗಳನ್ನು ಸ್ಥಾಪಿಸುವದು, ಸುಣ್ಣದ ತಯಾರಿಕೆಯನ್ನು ಹೆಚ್ಚಿಸುವದೂ ಆಗಿರುತ್ತದೆ. ಇದಕ್ಕೆಲ್ಲಾ 29-2 ಲಕ್ಷ ರೂ. ಒಂದು ವಾಳವೂ, 18-5 ಲಕ್ಷ 5 ವರ್ಷದ ವೆಚ್ಚವೂ ಆಗಿರುವದಾಗಿ ಅಂದಾಜು ಮಾಡಲಾಗಿದೆ (ಪ್ರೆಸ್ ನೋಟಿನ ಸಾರಾಂಶವಿದು)

ಭಾರತ ಸಮಸ್ಯೆ

ಇಸ್ಲಾಮಿಗೆ ಇಂಡೋನೇಷಿಯಾ ಜಾವಾ, ಪಾಲಸ್ಟೈನುಗಳಲ್ಲಿ ಪ್ರಮಾದವು ಸಂಭವಿಸಿದೆ. ಆದರೆ ಭಾರತ ದೇಶದಲ್ಲಿ ಸ್ವಾತಂತ್ರವನ್ನು ಸಂಪಾದಿಸುವಿಕೆಯೇ ಬೋಸರ ಭಾರತ ರಾಷ್ಟ್ರೀಯ ಸೈನ್ಯವು ಕೊಟ್ಟಿರುವ ಸಂದೇಶವು. ಈಗ ಭಾರತೀಯರ ಪ್ರಪ್ರಥಮ ಕರ್ತವ್ಯವು ಬ್ರಿಟಿಷರನ್ನು ಈ ದೇಶದಿಂದ ಕಳುಹಿಸಿಬಿಡುವದೇ ಆಗಲೀ. ಅಲ್ಪಸ್ವಲ್ಪ ಮತವಿಷಯಗಳಿಗಾಗಿ ನಮ್ಮನಮ್ಮೊಳಗೆ ಗಲಾಟೆಗಳನ್ನೂ ವಿಭೇದಗಳನ್ನೂ ಹಚ್ಚಿಕೊಳ್ಳುವುದಲ್ಲ. ಈಚೆಗೆ ರಾಯಲ್ ಇಂಡಿಯಾ ನಾವಿಕರು ಶ್ರೀ ಪಟೇಲರ ಮಾತನ್ನು ಶಿರಸಾವಹಿಸಿದ್ದಕ್ಕಾಗಿ ನಾನು ಸಂತೋಷಗೊಂಡವನಾಗಿರುತ್ತೇನೆ, ಎಂಬುದಾಗಿ ಕ್ಯಾಪ್ಟನ್ ಖಾಸವಾಜ್ ಖಾನರು ಹೇಳಿರುತ್ತಾರೆ.

ನರೇಂದ್ರ ಮತ್ತು ನಿಯೋಗ ಭೇಟಿ

ವಿವಿಧ ವರ್ತಮಾನ

ಕಲ್ಕತ್ತಾ ಏ 1— ಬಂದಾದಲ್ಲೂ ಸಕ್ಕರೆ ರೇಷನ್ನಿನಲ್ಲಿ ಖೋತಾ ಮಾಡಲಾಗಿದೆ.

ಮದರಾಸು ಏ 2— ನಗರದ ಪೋಲೀಸಿನವರ ಸಂಬಳ ಹೆಚ್ಚಿಸಲಾಗಿದೆ.

ಮಾಸ್ಕೊ ಸಾ 1— ಲಂಗ್ಲೋ ಅಮೇರಿಕನ್ನರು ಪ್ರಪಂಚದ ಮೇಲೆ ಅಧಿಕಾರ ಹವಣಿಸಲು ಪ್ರಯತ್ನಿಸುತ್ತಿರುವರೆಂದೂ, ರಷ್ಯಾದ ಮೇಲೆ ಕಟ್ಟತ್ತಿರುವರೆಂದೂ ರಷ್ಯಾ ಪ್ರಖ್ಯಾತ ಲೇಖಕರಾದ ಅಲೆಕ್ಸಿ ಲಿಯೆಂಟಿವ್‌ರವರು ಬರೆದಿರುವರು.

ವಾಷಿಂಗ್ಟನ್ ಏ 1— ವೇ ತಿಂಗಳಲ್ಲಿ ಅಂತರ್ರಾಷ್ಟ್ರೀಯ ಆಹಾರ ಸಮ್ಮೇಳನ ನಡೆಯುವುದೆಂದೂ ಆಹಾರ ಬೆಳವಣಿಗೆ ಮತ್ತು ಹಂಚಿಕೆ ಯೋಜನೆಯು ಚರ್ಚಿಸಲಾಗುವುದೆಂದೂ ಹೇಳಲಾಗಿದೆ.

ತುಮಕೂರು ಏ 31— ಹರಿಜನ ಮಂದಿರವು ವಂದರಾಸು ಮಾಡಿ ಮಂತ್ರಿ ಮುನಿಸ್ವಾಮಿಯವರಿಂದ ತೆರೆಯಲಾಯಿತ್ತು.

ಮದರಾಸು ಏ 1— ಮನಿಸಿಪಲ್ ಸ್ಕೂಲುಗಳಲ್ಲಿ 26000 ಮಕ್ಕಳಿಗೆ ಉಚಿತವಾಗಿ ಹಾಲು ಡೊರೆಯಲು ಏರ್ಪಾಡಾಗಿದೆ.

ಸಕಲರಿಗೂ
ಹೊಸವರ್ಷದ ಶುಭಾಶಯಗಳು
" ಸತ್ಯವಾದಿ "

ವೃತ್ತಾಂತ ಸಂಗ್ರಹ

ನವದೆಹಲಿ, ಏ 2 ಮಂತ್ರಿಮಂಡಲ ನಿಯೋಗವು ಭೂಸಾಲ, ಪಾಟಿಯಾಲ ನವನಗರ, ಬಿಕಾನೀರ್, ಗ್ವಾಲಿಯರ್ ಮಹಾರಾಜರುಗಳನ್ನು ಭೇಟಿ ಮಾಡಿ ನರೇಂದ್ರರ ಅಭಿಪ್ರಾಯವನ್ನು ಅರಿತುಕೊಂಡರು.

ನವದೆಹಲಿ ಏ 1 — ಪೆಥಿಕ್‌ಲಾರೆನ್ಸ್‌ರವರು ಕ್ರಿಸ್ಟ್‌ರವರೂ ಗಾಂಧೀಜೀಯವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ನ್ಯೂಯಾರ್ಕ್ ಏ 1 — ಅಮೇರಿಕಾ ಸಂಸ್ಥಾನದ ಪಶ್ಚಿಮ ತೀರದಲ್ಲಿ ಅಲೆ ಹೊಡೆತದಿಂದ ಹವಾಯಿನಿಂದ ಸ್ಯಾನ್‌ಫ್ರಾನ್ಸಿಸ್ಕೋ ಮತ್ತು ಅಲಾಸ್ಕಾವಂಗೆ ತುಂಬಾ ನಷ್ಟವಾಗಿದೆ.

ವಾಷಿಂಗ್ಟನ್ ಏ 2 — ಜಪಾನ್ ಯುದ್ಧ ಪಾತಕಿಗಳವಿಚಾರಣೆಯಲ್ಲಿ ಒಬ್ಬ ಭಾರತೀಯನನ್ನು ನ್ಯಾಯಾಧೀಶರನ್ನಾಗಿ ನೇಮಿಸಲು ತೀರ್ಮಾನಿಸಿದೆ.

ಹೈಫಾ ಏ 1 — ಪ್ಯಾಲಿಸ್ಟೈನಿನಲ್ಲಿ ಮತ್ತೆ ಸ್ಫೋಟವಾಗಿ ಎರಡು ರೈಲ್ವೆ ಸೇತುವೆಗಳು ಚೂರುಚೂರಾದವು.

ಕೇಪ್‌ಟೌನ್, ಏ 2 — ದಕ್ಷಿಣ ಆಫ್ರಿಕಾದ ಭಾರತೀಯ ಮುಸೂದೆಯು ಎರಡನೆ ಸಾರಿ ಶಾಸನ ಸಭೆಯಲ್ಲಿ ಮಂಜೂರಾಯಿತ..

ಲಂಡನ್, ಏ 2 — 20 ವರ್ಷಗಳಿಂದ ರಾಜಕೀಯ ಹೊಡೆದಾಟಗಳಿಗೆ ಕಾರಣವಾಗಿದ್ದ ಟ್ರೀಪ್ ಡಿಸ್ಪ್ಯೂಟ್ಸ್ ಮಸೂದೆಯನ್ನು ಮನ್ನಾ ಮಾಡಲಾಗಿದೆ.

ವಂಬೆಲಕಾರವಲ್ಲಿ ಶಿಡಿಲು ಮಿಂಚು ಕೂಡಿದ ಭಾರಿ ಮಳೆ ಬಂದು ನಾಯರ್ ಹೆಂಗಸೊಬ್ಬಳ ಮೇಲೆ ತೆಂಗಿನಮರ ಬಿದ್ದು ಸತ್ತಳು.

ಹರಿಜನರಿಗೆ ದೇಮಲಯ ಪ್ರವೇಶ

—

ಶ್ರೀಮತಿ ಅನ್ನಪೂರ್ಣಮ್ಮ, ಎಂ ಆರ್.ಎ.

ಇತರ ನಾಗರಿಕ ಮುಂದುವರಿದಿರುವ ದೇಶಗಳಂತೆ ನಮ್ಮ ಭರತ ಖಂಡವೂ ಅದುಲ್ಲಿಯೂ ನಮ್ಮ ಮಾದರಿ ವೈಸೂರೆನ್ನಿಸಿಕೊಂಡಿರುವ ಮೈಸೂರು ದೇಶವು ಆ ರಾಷ್ಟ್ರಗಳಿಗೆ ಸರಿಸಮನಾಗಿ ತಲೆಯೆತ್ತಿ ನಿಲ್ಲಬೇಕಾದರೆ, ಮೊದಲು ಗಮನಕೊಡಬೇಕಾದದ್ದು ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ. ಇವುಗಳಾಗಬೇಕಾದರೆ ಎಲ್ಲ ಜನಗಳಿಗೂ ಇರುವಂತೆ ಇವರಿಗೆ ದೇವಾಲಯ ಪ್ರವೇಶವನ್ನು ಕೊಡುವುದರ ಮುಖೇನ ಪೂಜಾ ಸ್ವಾತಂತ್ರ್ಯವನ್ನು ಕೊಡಬೇಕು.

ಹಿಂದುಗಳು ಈ ಹರಿಜನರಿಗೆ ಬಹಳ ಹಿಂದಿನ ಕಾಲದಿಂದಲೂ ಬಹಳ ಅನ್ಯಾಯ ಮಾಡಿರುವುದಲ್ಲದೆ ಮುಂದೆಯೂ ಇದೇ ರೀತಿ ನಾವು ಈ ಹಿಂದುಳಿದಿರುವ ಕಗ್ಗತ್ತಲೆಯಲ್ಲಿರುವ ನಮ್ಮ ಸಹೋದರರಿಗೆ ಹಿಂದಿನಂತೆ ಮುಂದೆಯೂ ಅನ್ಯಾಯ ಮಾಡುವುದಾದರೆ ನಮಗೆ ಮೋಕ್ಷ ಸಿಕ್ಕುವುದಿಲ್ಲ. ಅದರಲ್ಲಿಯೂ ಈ 20 ನೆಯ ಶತಮಾನದಲ್ಲಿ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಎಲ್ಲ ವಿಧವಾದ ಹಕ್ಕು ಬಾಧ್ಯತೆಗಳನ್ನು ಕೊಟ್ಟು ಸರಿಸಮಾನತೆಯಿಂದ ಕಾಣದಿದ್ದರೆ ಈ ಜನಗಳಿಂದ ದೇಶಕ್ಕೆ ಅದರ ಮುಖಾಂತರ ಈಗ ಆಗುತ್ತಿರುವ ಸೇವೆಯು ಕಡಿಮೆಯಾಗುವುದಲ್ಲದೆ ಮುಂದುವರಿಯಲು ಅನುಕೂವಿಲ್ಲದಿರುವುದು.

ನಾವು ಧಾರ್ಮಿಕ ದೃಷ್ಟಿಯಿಂದ ಈ ವಿಷಯವನ್ನು ಪರೀಕ್ಷಿಸುವುದಾದರೂ ಧರ್ಮವನ್ನು ಬಿಟ್ಟು ಅಧರ್ಮದ ದಾರಿಯಲ್ಲಿಯೇ ನಡೆದಿದ್ದೇವೆ. ಏಕೆಂದರೆ ಮನುಷ್ಯನು ದೇವರ ಮಗನು ಎಲ್ಲರೂ ದೇವರ ದೃಷ್ಟಿಯಿಂದ ಒಂದೇ ಎಂದು ಹೇಳುತ್ತಾರೆ. ನಮ್ಮ ಹಿಂದೂ ಧರ್ಮವು ಎಲ್ಲಿಯೂ ಒಂದೇ ಎಂದು ಒತ್ತಿ ಹೇಳುತ್ತಾಯಿದೆ. ಹೀಗಿರುವಾಗ ನಾವು ಧರ್ಮದ ಹೆಸರಿನಲ್ಲಿ ಅಧರ್ಮದಿಂದ ನಡೆಯುವುದು ಸರಿಯೆ ? ಈ ದೃಷ್ಟಿಯಿಂದ ನಾವು ಅವರಿಗೆ ಅನ್ಯಾಯ ಮಾಡಿ ಅವರ ಅಧೋಗತಿಗೆ ಕಾರಣರಾಗಿದ್ದೇವೆ. ಆದುದರಿಂದ ಈಗಲಾದರೂ ನಮ್ಮ ತಪ್ಪನ್ನು ತಿಳಿದು ಅವರಿಗೆ ದೇವಾಲಯ ಪ್ರವೇಶ ಕೊಡುವುದರ ಅವರ ವೇಲ್ಮೆಗೆ ಅವಕಾಶ ಕೊಡುವದು ನಮ್ಮ ಧರ್ಮ.

ಈಗ ನಾವು ಹರಿಜನರನ್ನು ದೇವಾಲಯಕ್ಕೆ ಪ್ರವೇಶ ಮಾಡಿಸಿ ಅವರಿಗೆ ನಮಗಿರುವಂತೆ ಹಕ್ಕುಬಾಧ್ಯತೆಗಳನ್ನು ಕೊಡುವುದರಿಂದ ನನಗೆ ಯಾವ ವಿಧವಾದ ನಷ್ಟವೂ ಆಗುವುದಿಲ್ಲ. ಕೆಲವರು ಅವರು ಬಹಳ ಕೊಳಕರು, ಗೂಳಿಕು ವೃತ್ತಿಯನ್ನು ಮಾಡುವವರು ಅದರಿಂದ ಅವರು ದೇವಾಲಯ ಪ್ರವೇಶಕ್ಕೆ ಅರ್ಹರಲ್ಲವೆಂದು ವಾದ ಮಾಡಬಹುದು. ಆದರೆ ಇವುಗಳೆಲ್ಲಕ್ಕೂ ಕಾರಣರಿಂದರೆ ನಾವೇ – ಆದರಿಂದ ಇದು ನಮ್ಮ ತಪ್ಪು – ಈ ತಪ್ಪನ್ನು ತಿಳಿದು ನಾವು ಸರಿಪಡಿಸುವುದಾದರೆ ಅವರೂ ನಮ್ಮಂತೆ ಸಂಸ್ಕೃತರಾಗುವುದಂಲ್ಲಿ ಯಾವ ಅಡ್ಡಿಯೂ ಇಲ್ಲ. ಇಷ್ಟು ಆಗಲೇ ಅನೇಕ ನಾಗರಿಕ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ನೋಡಿ ಉದಾಹರಣೆಗಳಾಗಿವೆ (ತಿರುವಾಂಕೂರು)

ಆವರು, ನಾವು ಇಷ್ಟು ಅನ್ಯಾಯ ಮಾಡಿರುವಾಗಲೂ ಕೂಡಾ ಸಲ್ಲಿಸಿರುವ ಸೇವೆಯನ್ನು ನೋಡುವುದಾದರೆ ಬಹಳವಾದ ಸೇವೆಯನ್ನೇ ಮಾಡಿದ್ದಾರೆ ವ್ಯವಸಾಯ, ಗಾಯ್ಸು ನಿರ್ಮೋಚಕರಣ ಕಾರ್ಯ—ಇವುಗಳೆಲ್ಲಕ್ಕೂ ಅವರ ಸೇವೆ ಅಗತ್ಯ. ಅಂಥವರಿಗೆ ನಾವು ನಮ್ಮ ಸಮಾಜದಲ್ಲಿ ಸರಿಯಾದ ಸ್ಥಾನಮಾನಗಳನ್ನು ದೊರಕಿಸಿಕೊಡದಿರುವುದು ಯಾವ ನ್ಯಾಯ ಮತ್ತು ಧರ್ಮ. ಈಗಲಾದರೂ ಈ ಸದವಕಾಶವನ್ನು ದೇವಾಲಯ ಪ್ರವೇಶಕ್ಕೆ ಅನುಕೂಲ ಮಾಡಿಸಿವುದರ ಮೂಲಕ ಮಾಡಬಹುದು.

(ಸಶೇಷ)

ಸಕಲರಿಗೂ
ಹೊಸವರ್ಷದ ಶುಭಾಶಯಗಳು

ಶ್ರೀವತ್ಸಾ ಸ್ಟೋರ್ಸ್
ಚಾಮರಾಜ ರೋಡ್, ಮೈಸೂರು

At Ranjit ❁ From 31–3–46

RAJPUTANI

Ranjit's 101 st Picture

ಜಯರಾಜ್ — ವೀಣಾ — ಭಿಖಿರಿಗುಪ್ತ — ಗುಲಾಂಮಹಮದ್

— ಪಾತ್ರವಹಿಸಿರುವ —

ರಾಜಪುತಾನಿ

At Opera

4 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

ಮುಂದಿನ ವಿನೋದ—

ಹೊನ್ನಪ್ಪ ಭಾಗವತರ್ ಟಿ ಆರ್. ರಾಜಕುಸುಮಾ ವಸಂತ ಕೋಕಿಲಂ

ಬಾಲಯ್ಯ ಕಾಳಿದಾಸ ರತ್ನಂ

ಪಾತ್ರವಹಿಸಿರುವ

— ವಾಲ್ಮೀಕಿ —

(ತಮಿಳು)

Get Medical Diplomas

At home:— Ayurvedic Homeopathic, Unani, etc., Prospectus Free.

Old Indian Medical College
Kotgarh, Simla

ಹಸಕ ಬಿಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ನೀರಶಿಟ್ಟ & ಸಕ
ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satyavadi Press, Chamaraja Agrahar, Mysore

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ

— ತಾ || 30–3–46 —

ಹರಾಜು ನೋಟಿಫಿಕೇಷನ್

ಇದರಿಂದ ಸರ್ವ ಜನಗಳಿಗೆ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ರೇಷನಿಂಗ್ ಇಲಾಖೆ ಗೋಡೌನುಗಳಲ್ಲಿರತಕ್ಕ ಎರಡೂ ಮುಕ್ಕಾಲು ವರ್ಷದ 408 ಮೂಟೆ ಮತ್ತು 62 ಸೇರು ಉದ್ದಿನ ಬೇಳೆ ಮತ್ತು ಸುಮಾರು ಎರಡೂವರೆ ಕ್ವಾಲು ವರ್ಷದ 280 ಮೂಟೆ 10 ಸೇರು ಉದ್ದು ಸಹ ಮೈಸೂರು ಸಿಟಿ ರೇಷನಿಂಗ ಆಫೀಸರವರಿಂದ ಆಥವಾ ಅವರಿಂದ ಡೆಪ್ಯೂಟಾದುನ್ನಾ ಆಫೀಸರಿಂದ ತಾ || 11–4–46 ನೇ ಗುರುವಾರ ಬೆಳಿಗ್ಗೆ 10–30 ಘಂಟಿಗೆ ಸಾರ್ವಜನಿಕ ಬಹಿರ್ದೃಶ್ಯವಾಗಿ ಚತ್ರದ ಗೋಡೌನ್ ಬಳಿ ಬಹಿರಂಗ ಹರಾಜು ಮಾಡಲ್ಪಡುತ್ತೆ.

ಹರಾಜು ಮಾಡಲು ಇಷ್ಟವುಳ್ಳವರು 50 ರೂಪಾಯಿಗಳ ಶೇವಣಿಯನ್ನು ಮುಂದಾಗಿ ಒಪ್ಪಿಸಿ ಮಾಡಿಸಬೇಕು. ಸದರಿ ಮೊಬಲಗು ಹರಾಜು ಖೈದಾದ ನಂತರ ವಾಪಸು ಮಾಡಲಾಗುತ್ತೆ.

ಹರಾಜು ಖೈದಾಪ ಮೇಲೆ ಆಖೈರು ಬಿಡ್ಡುದಾರರು ಬಿಡ್ಡಿನ ಶೇಕಡ 25 ಹೊಬಲಗನ್ನು ಸ್ಥಳದಲ್ಲಿ ಹಾಜರುಮಾಡತಕ್ಕದ್ದು. ಉಳಿಕೆ ಮೊಬಲಗನ್ನು ಹರಾಜು ಮುಂಜೂರಾದ ಒಂದು ವಾರದಲ್ಲಿ ಸಂದಾಯ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಶೇಕಡ 25 ಶೇವಣಿಯನ್ನು ಸರಕಾರಕ್ಕೆ ಫರ್‌ಫೀಟು ಮಾಡಿಕೊಳ್ಳುವುದಲ್ಲದೆ ಮರುರಾ ಹರಾಜು ಮಾಡಿಸಿ, ಅದರಿಂದಾಗುವ ಸಮಸ್ತ ನಷ್ಟವನ್ನು ಮೊದಲಿನ ಬಿಡ್ಡುದಾರರಿಂದ ಕಂದಾಯದ ಬಾಕಿಯಂತೆ ವಸೂಲ್ಮಾಡಲಾಗುತ್ತೆ. ಮರುರಾ ಹರಾಜಿನಲ್ಲಿ ಹೆಚ್ಚಿಗೆ ಉತ್ಪತ್ತಿಯಾದಲ್ಲಿ ಮೊದಲಿನ ಬಿಡ್ಡುದಾರರಿಗೆ ಯಾವ ವಿಧವಾದ ಪಾಯಿದೆಯೂ ಕೊಡಲ್ಪಡುವುದಿಲ್ಲ.

ಈ ಸರಕನ್ನು ನೋಡಲಪೇಕ್ಷಿಸುವವರು ರೇಷನಿಂಗ್ ಆಫೀಸಿನಲ್ಲಿ ಈ ಲಾಗಾಯ್ತು ನೋಡಬಹುದಾಗಿರುತ್ತೆ.

ಹರಾಜು ಸರಕಾರದ ಮುಂಜೂರಾತಿಗೆ ಒಳಪಟ್ಟಿರುತ್ತದೆ ಹರಾಜು ಮುಂಜೂರಾದ ಏಳು ದಿವಸಗಳೊಳಗೆ ಮಾಲನ್ನು ಸ್ವಧರ್ಮ ಪಡೆಯತಕ್ಕದ್ದು.

(Sd) Abdul Razak
ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ಶಕ್ತಿಸುಧಾ

ಬೆಲೆ ಬಾಟಲಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

For Good Printing

L. N. Press

Sriramp st MYSORE